ಅನ್ನಪೂರ್ಣ, ಶಿವಮೊಗ್ಗ
*ಹಿಟ್ಲರನ ಮೀಸೆ ಎಷ್ಟು ಇಂಚು ಉದ್ದವಿತ್ತು?*



ಅವನ ಮೂಗಿನ ಎಡಹೊಳ್ಳೆಯ ತುದಿಯಿಂದ ಬಲಹೊಳ್ಳೆಯ ತುದಿಯವರೆಗೆ ಎಷ್ಟು ಇಂಚು ಅಳತೆಯಿತ್ತೋ ಅಷ್ಟು ಇಂಚು.

ಎಚ್.ಆರ್. ದೇಸಾಯಿ, ರಾಯಚೂರು
*ಕೆರಳಿದ ಸಿಂಹ, ಕೆರಳಿದ ಸರ್ಪ, ಕೆರಳಿದ ಹೆಂಡತಿ; ಇವುಗಳಲ್ಲಿ ಯಾವುದರ ಮುಂದೆ ನಿರ್ಭಯವಾಗಿ ನಿಲ್ಲಬಹುದು?*
ಮೂರರ ಮುಂದೆಯೂ ನಿಲ್ಲಬಹುದು ಕ್ರಮವಾಗಿ ಸಿಂಹಿಣಿ, ನಾಗಿಣಿ, ಜಿರಳೆ ಆಗಿ ಹುಟ್ಟಿರಬೇಕಷ್ಟೆ!

ಚಿರಂತನ, ಕುಕ್ಕೆ ಸುಬ್ರಹ್ಮಣ್ಯ
*ಮಗು ಹುಟ್ಟಿ ಅಳುವಾಗ ದೊಡ್ಡವರು ನಗುತ್ತಾರಂತೆ. ದೊಡ್ಡವರು ಸಾಯುವಾಗ ಮಕ್ಕಳು ನಗುವುದಿಲ್ಲವಂತೆ. ಏಕೆ ರಾಂಜಿ?*
ಒಮ್ಮೆ ನಕ್ಕವಂತೆ. ಕೂಡಲೆ 'ಸಾವಿನ ಮನೇಲಿ ನಗ್ತೀಯಾ...' ಎಂದು ಸರಿಯಾಗಿ ಬಾರಿಸಿ ಅಳಿಸಿದರಂತೆ.

ಕುಮಾರ ಚಲವಾದಿ, ಹೊಳೆನರಸಿಪುರ
*ತುಂಬಾ ಆತ್ಮೀಯರಿಗೆ ಬದುಕು ಕಟ್ಟಿಕೊಳ್ಳಲು ಸಹಾಯ ಮಾಡಿದೆ; ಈಗವರು ನನ್ನತ್ತ ತಿರುಗಿಯೂ ನೋಡುತ್ತಿಲ್ಲ. ಏನು ಮಾಡಲಿ?*




ಮಾರ್ಗ ತೋರಿಸಿದ ಜಿಪಿಎಸ್ ಅನ್ನು ಗುರಿ ತಲುಪಿದಾಗ ಸ್ವೋರ್ ಮಾಡಿಕೊಳ್ಳದೆ ಆಫ್ ಮಾಡುವುದು ಆಧುನಿಕ ಲಕ್ಷಣ ಸಾರ್.

ಮೋಹನರಾಜು ಎಸ್.ಎ. ಶಿವಮೊಗ್ಗ
*ಬದಲಾವಣೆ ಜಗದ ನಿಯಮ ಎನ್ನುವುದಾದರೆ ಬಣ್ಣ ಬದಲಾಯಿಸುವುದು ಸರಿಯೆ?*
ಕಂಬಳಿಹುಳದ ಬಣ್ಣ ಬಿಟ್ಟು ಚಿಟ್ಟೆಯ ಬಣ್ಣ ಹೊಂದಿ ಮನಕ್ಕೆ ಸಂತಸ ಕೊಡುವುದು ಸರಿಯಷ್ಟೇ ಅಲ್ಲ, ಅನುಕರಣೀಯ.

ಸುಂದರ್, ಬೆಂಗಳೂರು
*ಚುನಾವಣಾ ಪ್ರಚಾರದ ವೇಳೆ ಸ್ಪರ್ಧಿಗಳು ಚಿಯರ್ ಗರ್ಲ್ಸ್ ಸಹಾಯ ಪಡೆದರೆ ಹೇಗೆ?*
ಊಹೂಂ. ಹೊಲಸು ಕೆಲಸಗಳಿಗೆ ಚಿಯರ್ ಗರ್ಲ್ಸ್‌ಗಿಂತ ಚಿಯರ್ಸ್ ಬಾಯಿಗಳೇ ವಾಸಿ.

ಎಂ.ಎ. ಕುಮಾರ್, ಬೆಂಗಳೂರು
*ಗುಡಿಯೊಳಗೆ ಹೋಗುವ ಭಕ್ತರು ಮೊದಲು ಗಂಟೆ ಹೊಡೆಯುವ ಕಾರಣ?*
ಮನೆಗೆ ಎಮ್ಮೆ ನುಗ್ಗಿದಂತೆ ನುಗ್ಗದೆ ಕಾಲಿಂಗ್ ಬೆಲ್ ಒತ್ತುವುದು ಮರ್ಯಾದೆಯ ಲಕ್ಷಣ.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
*ಕ್ಷುಲ್ಲಕ ಪಗಡೆಯಲ್ಲಿ ಸೋತ ಪಾಂಡವರು ಹದಿನೆಂಟು ದಿನಗಳ ಮಹಾಸಂಗ್ರಾಮದಲ್ಲಿ ಗೆದ್ದಿದ್ದಾದರೂ ಹೇಗೆ?*
ಪಾಂಡವರಿಗೆ ದಾಳ ಉರುಳಿಸಲು ಗೊತ್ತಿರಲಿಲ್ಲ; ತಲೆ ಉರುಳಿಸಲು ಗೊತ್ತಿತ್ತು.

ಟಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*ಜಾತಿಗಳ ಸಮೂಹವನ್ನು ಇತ್ತೀಚೆಗೆ ಸಮಾಜ ಎಂದು ಏಕೆ ಕರೆಯುತ್ತಾರೆ?*
ಸರಿಯೇ; ಸಮ+ಅಜ= ಸಮಾಜ. ಒಂದೇ ವಿಧದ ಕುರಿಗಳ ಗುಂಪೇ ಸಮಾಜ!

ಮೇಟಿ ಕೊಟ್ರಪ್ಪ, ಬಳ್ಳಾರಿ
*ಕಲ್ಲುಬಂಡೆಯಂತಹ ಆಡಳಿತ ಯಂತ್ರದಿಂದ ಜನಪ್ರಗತಿ ಸಾಧ್ಯವೆ?*
ಛಿದ್ರಗೊಳಿಸದೆ ಕಟೆದು ಶಿಲ್ಪ ತಯಾರಿಸುವ ಮನವಿರುವ ಜನ, ಪ್ರತಿಪಕ್ಷ ಇದ್ದರೆ ಸಾಧ್ಯ.

ಎಂ.ಎನ್. ಸೋಮಶೇಖರ್, ಮೈಸೂರು
*ಸತ್ತುಹೋಗಿದ್ದ ವ್ಯಕ್ತಿಗೆ ಮತ್ತೆ ಜೀವ ಬಂದು ಓಡಾಡಿದಾಗ ಹೇಗಿರುತ್ತೆ?*
ಚೆನ್ನವೇ. ತಮ್ಮ ಡೆತ್ ಸರ್ಟಿಫಿಕೇಟ್ ತೋರಿಸಿ ತಾವೇ ವಿಮೆ ಹಣ ತರಬಹುದು!

ಹಾಡ್ಯ ಬ. ಜಯಾನಂದ, ಮೈಸೂರು
*ಮಾಮೂಲಿ ಹೆಗ್ಗಣಗಳಿಗೂ, ಸರ್ಕಾರಿ ಹೆಗ್ಗಣಗಳಿಗೂ ಏನು ವ್ಯತ್ಯಾಸ?*
ಸರ್ಕಾರಿ ಹೆಗ್ಗಣಗಳಿಗೆ ಪೊರಕೆ, ಚಪ್ಪಲಿಗಳಲ್ಲಿ ಹೊಡೆಯುವಂತಿಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು
*ಗಾಂಧಾರಿಗೂ, ನ್ಯಾಯದೇವತೆಗೂ ಏನು ವ್ಯತ್ಯಾಸ?*
ಗಾಂಧಾರಿಗೆ ಒಬ್ಬನೇ ಶಕುನಿ!

## ಬಹುಮಾನಿತ ಪ್ರಶ್ನೆ

ವಸುಂಧರಾ ಎಸ್.ಎನ್. ಕುಶಾಲನಗರ
*ವೇದಿಕೆಯಲ್ಲಿ ಅಂತರ್ಜಾತೀಯ ವಿವಾಹ ಪ್ರತಿಪಾದಿಸುವವರು ತಮ್ಮ ಮಕ್ಕಳಿಗೆ ಸ್ವಜಾತಿಯವರನ್ನೇ ಹುಡುಕುತ್ತಾರಲ್ಲಾ...?*
ಮಾರ್ಕೆಟಿಂಗ್ ನಿಯಮ; ಅಡ್ವರ್ಟೈಸ್‌ಮೆಂಟೇ ಬೇರೆ, ಪ್ರಾಡಕ್ಟೇ ಬೇರೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಬಾಳಲ್ಲಿ ಬಯಸಿದ್ದೆಲ್ಲವೂ ಸಿಗುವಂತಿದ್ದಿದ್ದರೆ?*
ದೇವನ ಬೇಡಿಕೆ ತಗ್ಗಿ ಇಡೀ ವಿಶ್ವದ ಮಂದಿರ, ಮಸೀದಿ, ಚರ್ಚ್‌ಗಳಿಗೆ ಬೀಗ ಹಾಕಬೇಕಾಗುತ್ತಿತ್ತು.

ಕೆ.ಪಿ. ರಾಮಚಂದ್ರ, ಬೈಲಹೊಂಗಲ
*ದೇವರು ನಮ್ಮಲ್ಲೇ ಇರುವನು ಎನ್ನುವರು ಬೇರೆ ಬೇರೆ ದೇವಸ್ಥಾನಗಳಿಗೆ ಭೇಟಿ ನೀಡುವುದು ಏಕೆ?*



ಸೌಂದರ್ಯ ತರುಣಿಯಲ್ಲೇ ಇದ್ದರೂ ಕನ್ನಡಿ ನೋಡುವ ಚಟ ಇರುವುದಿಲ್ಲವೆ, ಇದೂ ಹಾಗೆಯೇ.

ಕಾಳೀಹುಂಡಿ ಕೆ.ವಿ. ಶಿವಕುಮಾರ್, ಮೈಸೂರು
*ಪ್ರೀತಿಯಲ್ಲಿ ಮುಳುಗಿರುವ ನನ್ನವಳಿಗೆ ಸವಾಲ್ ಹಾಕಲೋ ಅಥವಾ ಜವಾಬ್ ಕೊಡಲೋ?*
ಆಕೆ ಮುಳುಗಿರುವುದು ಪ್ರೀತಿಯಲ್ಲಿ, ಕ್ವಿಝ್ ಪ್ರೋಗ್ರಾಂನಲ್ಲಲ್ಲ; ಊಟ ಹಾಕಿ, ಪ್ರೀತಿ ಕೊಡಿ.

ಸುರೇಶ ಎಂ., ಪದ್ದೆಬೈಲ್ ನೆಟ್ಲ
*ರಾಮ್‌ಜೀ, ನಿಮ್ಮನ್ನು ಸಸ್ಪೆಂಡ್ ಮಾಡಿದ್ದೇನೆ. ಮನೆಗೆ ಹೋಗಿ ರೆಸ್ಟ್ ತೆಗೆದುಕೊಳ್ಳಿ....?*
ಸರಿ ಮಾವಯ್ಯ; ಈಗಲೇ ಹೊರಟೆ ಎಂದು ಮಗಳಿಗೆ ಹೇಳಿಬಿಡಿ.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
*ಮನುಷ್ಯನ ಮದುವೆಯಲ್ಲೂ ಬ್ಯಾಂಡ್ ಬಾರಿಸುತ್ತಾರೆ; ಸತ್ತಾಗಲೂ ಬ್ಯಾಂಡ್ ಬಾರಿಸುತ್ತಾರೆ. ಏನಿದು ವಿಚಿತ್ರ?*
ಎಲ್ಲಿದೆ ವಿಚಿತ್ರ? ವಿವಾಹ ಮಹೋತ್ಸವ; ಸಾವು ಅಂತ್ಯೋತ್ಸವ. ಉತ್ಸವ ಇರುವಲ್ಲೆಲ್ಲ ಬ್ಯಾಂಡ್ ಇರುವುದು ಸಹಜ.

■ ರಾಮ್